## c) <u>ವೃತ್ತಿಪರ ಪರೀಕ್ಷೆ (Trade Test):-</u>

i) ವಾಟರ್ ಕ್ಯಾರಿಯರ್ ಮತ್ತು ಕಸ ಗುಡಿಸುವವರು (ಹಸಿ ಮತ್ತು ಒಣ) ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಯಾವುದೇ ವೃತ್ತಿಪರ ಪರೀಕ್ಷೆ (**Trade Test**) ಇರುವುದಿಲ್ಲ. ದೇಹದಾರ್ಢ್ಯತೆ ಪರೀಕ್ಷೆ, ಸಹಿಷ್ಣುತೆ ಪರೀಕ್ಷೆಗಳಲ್ಲಿ ಗಳಿಸಿರುವ ಅಂಕಗಳ ಹಾಗೂ ಎಸ್ಎಸ್ಎಲ್ಸಿ/ ತತ್ಸಮಾನ ವಿದ್ಯಾರ್ಹತೆಯಲ್ಲಿ ಗಳಿಸಿರುವ ಅಂಕಗಳನ್ನು ಕ್ರೋಢೀಕರಿಸಿ ಅದರ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುತ್ತದೆ.

ii**)** ಇನ್ನುಳಿದ ಹುದ್ದೆಗಳಾದ (ಕ್ಷೌರಿಕ, ಮೋಚಿ, ಅಡುಗೆಯವರು, ಬಡಿಗ, ಧೋಬಿ ಹಾಗೂ ಟೈಲರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಮೇಲೆ ತಿಳಿಸಿರುವ ದೇಹದಾರ್ಢ್ಯತೆ ಪರೀಕ್ಷೆ, ಸಹಿಷ್ಣುತೆ ಪರೀಕ್ಷೆಗಳಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ 50 ಅಂಕಗಳ ವೃತ್ತಿಪರ ಪರೀಕ್ಷೆಯನ್ನು ನಡೆಸಲಾಗುತ್ತದೆ.

| Sl. No. | Activity particulars | | Max Marks |
|---|---|---|---|
| i. | **Trade Test** | a) Practical demonstration (ಪ್ರಾಯೋಗಿಕ ಪ್ರದರ್ಶನ) | 35 |
| | | b) Oral assessment of respective trade (ವೃತ್ತಿ ಕುರಿತಾಗಿ ಮೌಖಿಕ ಮೌಲ್ಯಮಾಪನ) | 5 |
| **ii.** | **Experience (ಅನುಭವ)** | | |
| | a) Working experience of five years and above in respective trade. (ಅರ್ಜಿ ಸಲ್ಲಿಸಲಾದ ವೃತ್ತಿಯಲ್ಲಿ 5 ವರ್ಷ ಹಾಗೂ ಮೇಲ್ಪಟ್ಟ ಅನುಭವಕ್ಕೆ) | 6 Marks | 10 |
| | b) Working experience of two to five years in respective trade. (ಅರ್ಜಿ ಸಲ್ಲಿಸಲಾದ ವೃತ್ತಿಯಲ್ಲಿ 2 ವರ್ಷದಿಂದ 5 ವರ್ಷದ ಅನುಭವಕ್ಕೆ) | 4 Marks | |
| | a) Work experience of less than two years. (ಅರ್ಜಿ ಸಲ್ಲಿಸಲಾದ ವೃತ್ತಿಯಲ್ಲಿ 2 ವರ್ಷಕ್ಕಿಂತ ಕಡಿಮೆ ಇರುವ ಅನುಭವಕ್ಕೆ) | 0 Marks | |
| **Total** | | | **50** |
| **Work experience certificate shall be obtained from the employer. The certificate shall contain a valid Trade License, GST Tin Number and PAN Number of the employer.** ವೃತ್ತಿ ಅನುಭವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಮಾಲೀಕರಿಂದ ಪಡೆಯಬೇಕಿರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ಮಾಲೀಕರ ಅರ್ಹ ವೃತ್ತಿ ಪರವಾನಗಿ, ಜಿ.ಎಸ್.ಟಿ, ಟಿನ್ ಸಂಖ್ಯೆ ಮತ್ತು ಪಾನ್ ಸಂಖ್ಯೆಯನ್ನು ನಮೂದಿಸಲ್ಪಟ್ಟಿರಬೇಕು). | | | |

**ಪ್ರತಿ ವೃತ್ತಿಪರ ಪರೀಕ್ಷೆಗಳಿಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತದೆ.**

**<u>ಕ್ಷೌರಿಕ (BARBER):</u>**

ಸಾಮಾಗ್ರಿ ಸಲಕರಣೆಗಳ ನಿರ್ವಹಣೆ, ಕೂದಲು ಕತ್ತರಿಸುವಿಕೆ [Handling of tools, Hair Cuttting,]

**<u>ಅಡಿಗೆಯವರು (COOK)</u>**

ಸಮಿತಿಯು ನಿರ್ಧರಿಸುವಂತೆ ಸಸ್ಯಹಾರಿ ಮತ್ತು ಮಾಂಸಹಾರಿ ಊಟ ಪದಾರ್ಥಗಳನ್ನು ತಯಾರಿಸುವಿಕೆ. [Vegetarian and Non-Vegetarian food item to be prepared at the discretion of committee.]

**<u>ಧೋಬಿ (DHOBI)</u>**

ಬಟ್ಟೆಯನ್ನು ಒಗೆಯುವುದು, ಖಾಕಿ ಕಾಟನ್, ಉಲ್ಲನ್ನು ಹಾಗೂ ಟೆರಿಕಾಟನ್ ಸಮವಸ್ತ್ರವನ್ನು ಇಸ್ತ್ರಿ ಮಾಡುವುದು. [Washing of clothes, Ironing of khaki Cotton Uniform, ironing of woolen, Terry cot uniforms.]

ವೃತ್ತಿವಾರು ಪರೀಕ್ಷೆಗಳ ನಂತರ ಆಯ್ಕೆ ಸಮಿತಿಯು ಅಭ್ಯರ್ಥಿಯು ವೃತ್ತಿವಾರು ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಹಾಗೂ ಎಸ್‌ಎಸ್‌ಎಲ್‌ಸಿ/ತತ್ಸಮಾನ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳನ್ನು ಕ್ರೋಢೀಕರಿಸಿ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು. ಸದರಿ ಅರ್ಹತಾ ಪಟ್ಟಿಯಿಂದ ಮೀಸಲಾತಿ ಹಾಗೂ ಖಾಲಿ ಹುದ್ದೆಗಳ ಅನುಸಾರ ವೃತ್ತಿವಾರು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ತಯಾರಿಸಲಾಗುವುದು.

**<u>ಟಿಪ್ಪಣಿ :</u>**

i) ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯನ್ನು ಒಂದು ದೈಹಿಕ ಪರೀಕ್ಷೆಯ ಸಮಿತಿಯು ನಡೆಸುತ್ತದೆ. ಯಾವುದೇ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಪರಿಗಣಿಸಲಾಗುವುದಿಲ್ಲ. ದೈಹಿಕ ಪರೀಕ್ಷೆಯ ಸಮಿತಿಯು ನೀಡುವ ಫಲಿತಾಂಶವೇ ಅಂತಿಮವಾಗಿರುತ್ತದೆ.

ii) ಸಹಿಷ್ಣತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆ ಪೂರ್ಣಗೊಂಡ ನಂತರ ಅಭ್ಯರ್ಥಿಗಳು ದೈಹಿಕ ಪರೀಕ್ಷೆ ಸಮಿತಿ ಸಮ್ಮುಖದಲ್ಲಿ ನಿಗದಿತ ನಮೂನೆಗೆ ಸಹಿ ಮತ್ತು ಎಡಗೈ ಹೆಬ್ಬೆಟ್ಟಿನ ಗುರುತು ಹಾಕಬೇಕು. ಇಲ್ಲವಾದರೆ ಅಂತಹವರನ್ನು ಅನರ್ಹರೆಂದು ಪರಿಗಣಿಸಲಾಗುವುದು.

iii) ನಿಗದಿಪಡಿಸಿರುವ ಕನಿಷ್ಠ ಎತ್ತರ 170 ಸೆಂ.ಮೀ. ಹೊಂದಿರುವ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಿಲ್ಲದೆ ಇರುವ ಪಕ್ಷದಲ್ಲಿ ಕಡಿಮೆ ಎತ್ತರ ಹೊಂದಿರುವ ಮಾಜಿ ಸೈನಿಕ ಅಭ್ಯರ್ಥಿಗಳನ್ನು ಸಹ ಅರ್ಹತೆಗೆ ಅನುಗುಣವಾಗಿ ಅಂತಿಮ ಆಯ್ಕೆಗೆ ಪರಿಗಣಿಸಲಾಗುವುದು. ಕಡಿಮೆ ಎತ್ತರ ಹೊಂದಿರುವ ಅಭ್ಯರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆದಿದ್ದರೂ ಮೊದಲು ಕನಿಷ್ಠ ಎತ್ತರ ಹೊಂದಿರುವ ಮಾಜಿ ಸೈನಿಕ ಅಭ್ಯರ್ಥಿಗಳನ್ನು ಪರಿಗಣಿಸಿದ ನಂತರ ಕಡಿಮೆ ಎತ್ತರ ಹೊಂದಿರುವ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದು.

iv) ಪಾರದರ್ಶಕತೆಗಾಗಿ ಮೇಲೆ ಹೇಳಿದ ಎಲ್ಲಾ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯನ್ನು ವೀಡಿಯೋಗ್ರಫಿ ಅಥವಾ ಸಿಸಿ ಟಿವಿ ಮೂಲಕ ಸೆರೆಹಿಡಿಯಲಾಗುವುದು.

* ಅಭ್ಯರ್ಥಿಗಳು ಮೇಲ್ಕಂಡ ದೇಹದಾರ್ಢ್ಯತೆ ಮತ್ತು ಸಹಿಷ್ಣುತೆ ಪರೀಕ್ಷೆಗಳಲ್ಲಿ ಅರ್ಹರಾಗಿದ್ದರೂ ಸಹ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯು ಶಾರೀರಿಕವಾಗಿ ಸಧೃಡರಾಗಿರಬೇಕಾಗಿರುತ್ತದೆ. ಆದ್ದರಿಂದ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸುವಂತಹ ಯಾವುದೇ ದೈಹಿಕ ನ್ಯೂನ್ಯತೆಗಳನ್ನು / ಅಂಗವೈಕಲ್ಯಗಳನ್ನು ಹೊಂದಿರಬಾರದು.